# ಕೊರಳ್‌ಗೆ ಹರಳ್!

■ ಯು. ಅನಂತ್
ಚಿತ್ರಗಳು: ಕೃಷ್ಣವೇಣಿ ಪ್ರಸಾದ್ ಮುಳಿಯ



**ಅಚ್ಚಕೆಂಪಿನ ಬಳೆ, ಹಸುರು ಗೆರೆನ ಬಳೆ... ಅಂತ ಜಾನಪದರು ಇಂಪಾಗಿ ಹಾಡುತ್ತಿದ್ದರು. ಅಚ್ಚ ಕೆಂಪಿನ ಹರಳು ಹಾಕಿ ಮಾಡಿದ ಒಡವೆ ಕೂಡ ಆಭರಣ ಪ್ರಪಂಚದಲ್ಲಿ ಮೆರೆಯುತ್ತಿದೆ. ನೆಕ್ಲೇಸ್, ಬಳೆ, ಸ್ಟಡ್, ಪೆಂಡೆಂಟ್‌ಗಳಿಗೆ ಸೂಕ್ತವಾದ ಕೆಂಪು ಹರಳು ನೆಕ್ಲೇಸ್ ಕೊರಳಲ್ಲಿ ವಿಜೃಂಭಿಸುತ್ತದೆ.**

ಕತ್ತು ತುಂಬ ಮುತ್ತು ಸೇರಿದಂತೆ ಇತರ ಹರಳುಗಳ ನೆಕ್ಲೇಸ್, ಹಾರಮ್, ಸರ, ಗೆಜ್ಜೆ ಮಾಲಕ್... ಒಡವೆ ನೋಡುಗರ ಕಣ್ಣು ಕುಕ್ಕುತ್ತದೆ. ಇಷ್ಟೆಲ್ಲ ಒಡವೆ ಹೇರಿಕೊಳ್ಳುವ ಬದಲಾಗಿ ಅಚ್ಚಕೆಂಪು ಹರಳಿನ ಒಂದೇ ಒಂದು ನೆಕ್ಲೇಸ್ ತೊಟ್ಟರೆ ಪ್ಲೆಸೆಂಟ್ ಲುಕ್ ಕೊಡುತ್ತದೆ. ಕೈತುಂಬ ಮಿನುಗುವ ಬಳೆ ಹಾಕಿಕೊಳ್ಳುವುದಕ್ಕೆ ಪರ್ಯಾಯವಾಗಿ ಕೆಂಪು ಹರಳಿನ ಬಳೆ ಬೇರೆ ಒಡವೆಗಳಿಗೆ ಮೇಲ್ಪಂಕ್ತಿ ಹಾಕುತ್ತದೆ. ಎಷ್ಟೇ ಆಭರಣ ಇರಲಿ, ಎಲ್ಲವನ್ನೂ ಹಿಂದಿಕ್ಕಿ ಒಡವೆ ಜಗತ್ತಿನಲ್ಲಿ ಮೆರೆಯುವುದೆಂದರೆ ಅದು ಅಚ್ಚ ಕೆಂಪಿನ ಹೊಳೆಹೊಳೆಯುವ ಒಡವೆಗಳೇ.

ಮೇಲ್ನೋಟಕ್ಕೆ ದುಬಾರಿ ರೂಬಿಯಂತೆ ಕಂಡರೂ ಕೆಂಪು ಹರಳು ರೂಬಿಗಿಂತ ಭಿನ್ನ. ಬೆಲೆಯಲ್ಲೂ ಅಷ್ಟೆ. ರೂಬಿಗಿಂತ ಕಡಿಮೆ. ಚಿನ್ನದ ಮೇಲೆ ಈ ಹರಳುಗಳನ್ನು ಕೂರಿಸಿ ಮಾಡುವ ಕೆಂಪುಹರಳಿನ ಆಭರಣ ಎವರ್‌ಗ್ರೀನ್ ಫ್ಯಾಷನ್ ಟ್ರೆಂಡ್ ಕೂಡ ಆಗಿದೆ. ಹರಳಿನ ಒಡವೆಗಳಿಗೆ ಒಂದು ಪರಿಪೂರ್ಣ ಲುಕ್ ಬರುವುದೇ ಚಿನ್ನದಿಂದ. ಒಂದೇ ಒಂದು ಹರಳು ಇಡೀ ಆಭರಣದ ಒಟ್ಟು ಚೆಲುವನ್ನೇ ಇಮ್ಮಡಿಸಬಲ್ಲದು. ಹೀಗಾಗಿ ಕೆಂಪು ಹರಳಿನ ಒಡವೆಗೆ ಈಗ ಎಲ್ಲಿಲ್ಲದ ಡಿಮ್ಯಾಂಡ್!

ಕೊರಳಿನ ನೆಕ್ಲೇಸ್ ಮಾತ್ರವಲ್ಲ. ಕೆಂಪು ಹರಳಿನ ದೊಡ್ಡ ಉಂಗುರ, ದೊಡ್ಡ ಹರಳಿನ ಪೆಂಡೆಂಟ್, ಹರಳಿನ ಕಿವಿಯೋಲೆ, ಕೆಂಪು ಹರಳಿನ ಬಳೆ... ಹೀಗೆ ಹರಳಿನ ಆಭರಣಗಳಲ್ಲಿ ಹಲವು ವೈವಿಧ್ಯವಿದೆ. ರೌಂಡ್, ಓವಲ್, ಚೌಕಾಕಾರ ಮುಂತಾದ ಶೇಪ್‌ನ ಹರಳುಗಳ ಜೊತೆಗೆ ಕಂಟೆಂಪರರಿ ಶೇಪ್‌ನ ಹರಳುಗಳೂ ಇಂದು ಲಭ್ಯ. ಸಾಂಪ್ರದಾಯಿಕವಾಗಿಯೂ ಅಂದ ಕಾಣಿಸುವ ಕೆಂಪು ಹರಳು ಪುಟ್ಟ ಹುಡುಗಿಯಿಂದ ಹಿಡಿದು ಮುದುಕಿಯವರೆಗೆ ಅಚ್ಚುಮೆಚ್ಚು.

ಬೇರೆ ಹರಳುಗಳಂತೆ ಕೆಂಪು ಹರಳಿನ ಒಡವೆ ಖರೀದಿಸುವಾಗ '4 ಸಿ' ಸೂತ್ರಗಳನ್ನು